# ಪರಮಗೀತೆ

## ಮುನ್ನುಡಿ

"ಪರಮಗೀತೆ" ಎಂಬ ಗ್ರಂಥ ಹಲವು ಪ್ರಣಯ ಕವಿತೆಗಳ ಸರಮಾಲೆಯಾಗಿದೆ. ಸಾಮಾನ್ಯವಾಗಿ ಒಬ್ಬ ನಲ್ಲನು ತನ್ನ ನಲ್ಲೆಯನ್ನು ಕುರಿತೋ ಅಥವಾ ನಲ್ಲೆ ತನ್ನ ನಲ್ಲನನ್ನು ಕುರಿತೋ ಹಾಡುವ ಪ್ರೇಮಗೀತೆಗಳಿಂದ ಕೂಡಿರುವ ಈ ಗ್ರಂಥವನ್ನು ಹಿಬ್ರು ಮೂಲದಲ್ಲಿ "ಸೊಲೊಮೋನನ ಗೀತೆ" ಎಂದು ಕರೆಯಲಾಗಿದೆ.

ಯೆಹೂದ್ಯರ ಅಭಿಪ್ರಾಯದಂತೆ ದೇವರಿಗೂ ಅವರ ಪ್ರಜೆಯಾದ ಇಸ್ರಯೇಲರಿಗೂ ಇರುವ ಪ್ರೇಮ ಬಾಂಧವ್ಯವನ್ನು ಈ ಗ್ರಂಥ ಚಿತ್ರಿಸುವಂಥದ್ದಾಗಿದೆ. ಕ್ರಿಸ್ತ ಯೇಸುವಿಗೂ ಅವರಿಂದ ಸ್ಥಾಪಿತವಾದ ಧರ್ಮಸಭೆಗೂ ಇರುವ ನಿಕಟಸಂಬಂಧವನ್ನೂ ಇದು ಚಿತ್ರಿಸುತ್ತದೆ ಎಂಬುದು ಕ್ರೈಸ್ತ ಭಕ್ತಾದಿಗಳ ಅಭಿಮತ.

## ಪರಿವಿಡಿ


| | | | | |
|---|---|---|---|---|
| 1ನೇ ಗೀತೆ | – | 1.1 | – | 2.7 |
| 2ನೇ ಗೀತೆ | – | 2.8 | – | 3.5 |
| 3ನೇ ಗೀತೆ | – | 3.6 | – | 5.1 |
| 4ನೇ ಗೀತೆ | – | 5.2 | – | 6.3 |
| 5ನೇ ಗೀತೆ | – | 6.4 | – | 8.4 |
| 6ನೇ ಗೀತೆ | – | 8.5 | – | 14 |


## ಮೊದಲನೇ ಗೀತೆ

**1** ಸೊಲೊಮೋನನ ಪರಮಗೀತೆ:

**ನಲ್ಲೆ** : 2ಚುಂಬಿಸೆನ್ನನು ನಿನ್ನ ತುಟಿಗಳಿಂದ
ನಿನ್ನ ಪ್ರೀತಿ ಅತಿ ಮಧುರ
ಮಧುಪಾನಕ್ಕಿಂತ.
3 ನೀನು ಹಚ್ಚಿಕೊಂಡಿರುವ ತೈಲ ಎನಿತು
ಸುವಾಸನೀಯ
ಸುರಿದ ಪರಿಮಳದಂತೆ ವ್ಯಾಪ್ತ ನಿನ್ನ
ನಾಮಾಂಕಿತ
ಕನ್ಯೆಯರೆಲ್ಲರು ನಿನ್ನನು ಪ್ರೀತಿಸದಿರಲು
ಅಸಾಧ್ಯ.
4 ನನ್ನನ್ನು ತುಸು ಎಳೆ,
ಓಡೋಣ ನಾವು ಮುಂದಕ್ಕೆ;
ಅರಸನಾಗಿರು ನನಗೆ
ಕರೆದೊಯ್ಯಿ ನನ್ನನ್ನು ಅಂತಃಪುರಕ್ಕೆ.
ಹರ್ಷಿಸೋಣ, ಒಂದಿಗೆ ಆನಂದಿಸೋಣ

ಮಧುಪಾನಕ್ಕಿಂತ ನಿನ್ನ ಪ್ರೀತಿ ಸ್ತುತ್ಯಾರ್ಹ
ನಿನ್ನನ್ನು ಪ್ರೀತಿಸುವುದು ಎನಿತು ಸಹಜ !
5 ಓ ಜೆರುಸಲೇಮಿನ ಮಹಿಳೆಯರೇ,
ನಾನು ಕಪ್ಪಾಗಿರುವೆ ಕೇದಾರಿನ ಗುಡಾರಗಳಂತೆ
ಆದರೂ ಚೆಲುವೆ ಸೊಲೊಮೋನನಾ
ಪರದೆಗಳಂತೆ.
6 ದಿಟ್ಟಿಸಿ ನೋಡಬೇಡಿ ನನ್ನ ರೂಪವನ್ನೆ
ನಾ ಕಪ್ಪಾಗಿರುವುದು ಸೂರ್ಯನ
ತಾಪದಿಂದಲೆ.
ಸಿಟ್ಟುಗೊಂಡರು ಸಹೋದರರು ನನ್ನ ಮೇಲೆ
ಅಟ್ಟಿದರು ನನ್ನನು ತೋಟಕಾಯುವುದಕ್ಕೆ
ಗಮನ ಕೊಡಲಾಗಲಿಲ್ಲ ನನ್ನ ತನು ತೋಟಕ್ಕೆ.
7 ನನ್ನ ಪ್ರಾಣಪ್ರಿಯನೇ ಹೇಳು:
ನಿನ್ನ ಮಂದೆಯನ್ನು ನೀನು ಮೇಯಿಸುವುದೆಲ್ಲಿ?
ನಡುಹಗಲಲ್ಲಿ ಅದು ವಿಶ್ರಮಿಸುವುದೆಲ್ಲಿ?
ನಾನೇಕೆ ಅಲೆಯಬೇಕು ಮುಸುಕು
ಹಾಕಿದವಳಂತೆ
ನಿನ್ನ ಗೆಳೆಯರ ಮಂದೆಗಳ ಹಿಂದೆ?
**ನಲ್ಲ** : 8ಸ್ತ್ರೀಯರಲ್ಲಿ ಅತಿ ಸುಂದರಿಯೇ,
ನಿನಗಿದು ಗೊತ್ತಿಲ್ಲವಾದರೆ
ಹೋಗು ಕುರಿಹಿಂಡಿನ ಜಾಡಿನಲ್ಲೆ
ಮೇಯಿಸು ನಿನ್ನ ಮೇಕೆಮರಿಗಳನೆ
ಕುರುಬರ ಗುಡಾರಗಳ ಸಮೀಪದಲ್ಲೆ.
9 ಫರೋಹನ ರಥವನ್ನೆಳೆದ ಹೆಣ್ಣುಕುದುರೆಗೆ
ಹೋಲಿಸಿರುವೆ ನಾ ನಿನ್ನನು ಪ್ರಿಯಳೇ
10 ಎಷ್ಟು ಅಂದವಾಗಿವೆ ನಿನ್ನ ಕೆನ್ನೆಗಳು
ಕಿವಿಯೋಲೆಗಳಿಂದ !
ನಿನ್ನ ಕೊರಳು ಕಂಠಹಾರಗಳಿಂದ !
11 ಮಾಡಿಸುವೆ ನಿನಗೆ ಬಂಗಾರದ ಅಂಚು,
ಬೆಳ್ಳಿಯ ಕುಚ್ಚು.
**ನಲ್ಲೆ** : 12ಅತ್ತ ರಾಜನು ಮಂಚದ ಮೇಲೆ
ಮಲಗಿಕೊಂಡಿರಲು
ಇತ್ತ ಬೀರುತ್ತಿತ್ತು ನನ್ನ ಪರಿಮಳ ತೈಲ
ಸುವಾಸನೆಯನು.
13 ನನ್ನ ಭಾಗ್ಯಕ್ಕೆ ನನ್ನ ನಲ್ಲ
ಸ್ತನಗಳ ಮಧ್ಯೆಯಿರುವ ಪರಿಮಳ ಚೀಲ.
14 ನನ್ನ ಪಾಲಿಗೆ ನನ್ನ ಪ್ರಿಯನು
ಏನ್ಗೆದಿಯ ತೋಟದ ಹೂಗೊಂಚಲು.
**ನಲ್ಲ** : 15ಆಹಾ, ನನ್ನ ಪ್ರಿಯಳೇ, ನೀನೆಷ್ಟು
ಚೆಲುವೆ

ಆಹಾ ನೀನೆಷ್ಟು ಕೋಮಲೆ
ನಿನ್ನ ನೇತ್ರಗಳು ಪಾರಿವಾಳಗಳಂತೆ!
**ನಲ್ಲೆ** : 16ಆಹಾ, ಎನ್ನಿನಿಯಾ, ನೀನೆಷ್ಟು
ಸುಂದರ ನೀನೆಷ್ಟು ಮನೋಹರ !
17ನಮ್ಮ ಹಾಸಿಗೆ ಪಚ್ಚೆಪಸರೇ,
ನಮ್ಮ ಮೇಲ್ಚಾವಣಿ ತುರಾಯಿ
ಮರಗಳೇ
ಅದರ ತೊಲೆಗಳು ದೇವದಾರು
ವೃಕ್ಷಗಳೇ.

**2** ನಾನು ಶಾರೋನಿನ ನೆಲಸಂಪಿಗೆ
ತಗ್ಗಿನ ತಾವರೆ.
**ನಲ್ಲ** : 2ನನ್ನ ಪ್ರಿಯಳು ಸ್ತ್ರೀಯರಲ್ಲಿ ಶ್ರೇಷ್ಟಳು
ಮುಳ್ಳುಪೊದರಿನ ನಡುವೆ
ತಾವರೆಯಂತಿಹಳು.
**ನಲ್ಲೆ** : 3ನನ್ನ ಪ್ರಿಯನು ಪುರುಷೋತ್ತಮನು
ವನವೃಕ್ಷಗಳ ಮಧ್ಯೆ ಸೇಬಿನಂತಿಹನು.
ಕುಳಿತು
ಸಂತೋಷಗೊಂಡೆ ನಾನದರ
ನೆರಳಿನೊಳು
ಸಿಹಿ ನನ್ನ ನಾಲಿಗೆಗೆ ಅದರ ಫಲವು.
4 ಬರಮಾಡಿಕೊಂಡನು ನನ್ನನು ಔತಣದ ಮನೆಗೆ
ನನ್ನ ಮೇಲೆತ್ತಿದನು 'ಪ್ರೀತಿ' ಎಂಬ ತನ್ನ
ಪತಾಕೆ.
5 ಅಸ್ವಸ್ಥಳಾಗಿರುವೆನು ಅನುರಾಗದಿಂದ
ಉಪಚರಿಸಿ ನನ್ನನು ಸೇಬುಹಣ್ಣುಗಳಿಂದ
ಚೇತನಗೊಳಿಸಿರಿ ದೀಪದ್ರಾಕ್ಷೆಯಿಂದ.
6 ಆತನ ಎಡಗೈ ನನಗೆ ತಲೆದಿಂಬಾಗಿದ್ದರೆ
ಆತನ ಬಲಗೈ ನನ್ನನ್ನು ಆಲಂಗಿಸಿದರೆ
ಎಷ್ಟು ಚೆನ್ನಾಗಿರುತ್ತಿತ್ತು!
7 ಜೆರುಸಲೇಮಿನ ಮಹಿಳೆಯರೇ,
"ತಾನೇ ಏಳುವುದಕ್ಕೆ ಮುಂಚೆ
ನನ್ನ ಪ್ರಿಯನನ್ನು ಎಚ್ಚರಿಸದಿರಿ
ಆತನ ವಿಶ್ರಾಂತಿಗೆ ಭಂಗ ತರದಿರಿ"
ಎಂದು ನಿಮಗೆ ವಿಧಿಸಿರುವೆ
ಆಣೆಯಿಟ್ಟು ವನದ ಹುಲ್ಲೆ ಹರಿಣಿಗಳ
ಮೇಲೆ.

## ಎರಡನೇ ಗೀತೆ

**ನಲ್ಲೆ** : 8ಅಗೋ, ನನ್ನ ಕಾಂತನ ಸಪ್ಪಳ!
ಹಾರಿ ಬರುತಿಹನು ಬೆಟ್ಟಗಳ ಮೇಲೆ
ಜಿಗಿದು ಬರುತಿಹನು ಗುಡ್ಡಗಳ ಮೇಲೆ.
9 ನನ್ನ ಪ್ರಿಯನು ಇಹನು ಜಿಂಕೆಯಂತೆ,
ಎಳೆಯ ಹುಲ್ಲೆಯಂತೆ
ಇಗೋ, ನಿಂತಿಹನು ಗೋಡೆಯ
ಹಿಂಭಾಗದಲೆ,
ದೃಷ್ಟಿಸಿ ನೋಡುತಿಹನು ಕಿಟಕಿಗಳಲಿ
ಇಣುಕು ಹಾಕುತಿಹನು
ಜಾಲಾಂತರಗಳಲಿ.
10 ನನ್ನ ನಲ್ಲನು ನನ್ನೊಡನೆ ಮಾತಾಡಿ
ಹೀಗೆಂದನು:
**ನಲ್ಲ** : 'ಎದ್ದು ಬಾ, ಪ್ರಿಯತಮೆ,
ಬಾ ನನ್ನೊಂದಿಗೆ, ಸುಂದರಿಯೇ,
11 ಇಗೋ, ಚಳಿಗಾಲ ಕಳೆಯಿತು
ಮಳೆಗಾಲ ಮುಗಿಯಿತು.
12 ಧರೆಯಲ್ಲೆಲ್ಲ ಹೂಗಳು ಅರಳಿವೆ
ನಲಿದು ಹಾಡುವ ಕಾಲ ಬಂದಿದೆ
ಬೆಳವಕ್ಕಿಯ ಕೂಗು ನಾಡಿನಲ್ಲಿ ಕೇಳಿಸುತ್ತಿದೆ.
13 ಅಂಜೂರದ ಕಾಯಿಗಳು ಹಣ್ಣಾಗಿವೆ
ದ್ರಾಕ್ಷಾಬಳ್ಳಿಗಳು ಹೂಬಿಟ್ಟಿವೆ.
ಅದರ ಪರಿಮಳ ಹರಡುತ್ತಿದೆ.'
**ನಲ್ಲ** : ಎದ್ದು ಬಾ, ನನ್ನ ಪ್ರೇಯಸಿಯೇ
ಬಾ ನನ್ನೊಂದಿಗೆ, ಸುಂದರಿಯೇ.
14 ಬಂಡೆಯ ಬಿರುಕುಗಳಲ್ಲಿ
ಸಂದುಗಳ ಮರೆಯಲ್ಲಿ
ತಂಗಿರುವ ಪಾರಿವಾಳವೇ ಬಾ.
ನಿನ್ನ ರೂಪವನು ನನಗೆ ಕಾಣಿಸು
ನಿನ್ನ ದನಿಯನು ನನಗೆ ಕೇಳಿಸು.
ನಿನ್ನ ದನಿ ಎನಿತೋ ಇಂಪು!
ನಿನ್ನ ರೂಪ ಎನಿತೋ ತಂಪು!
15 ತೋಟಗಳನು ಹಾಳುಮಾಡುವಾ
ನರಿಗಳನ್ನೂ ಮರಿಗಳನ್ನೂ ಹಿಡಿದು ತನ್ನಿ
ಹೂಗಳು ಅರಳಿವೆ ನಮ್ಮ ತೋಟಗಳಲಿ.
**ನಲ್ಲೆ** : 16ನನ್ನ ಇನಿಯನು ನನ್ನವನೇ,
ನಾನು ಅವನವಳೇ
ಮೇಯುತಿವೆ ಅವನ ಮುಂದೆ
ನೆಲದಾವರೆಗಳ ನಡುವೆ.
17 ಕತ್ತಲು ಕಳೆಯುವ ಮುನ್ನ

ಹೊತ್ತುಮೂಡುವ ಮುನ್ನ
ಹೊರಟು ಬಾ, ನನ್ನ ಕಾಂತ
ಜಿಂಕೆಯಂತಿರು
ಪ್ರಾಯದ ಹುಲ್ಲೆಯಂತಿರು
ಬೇತೆರ್ ಪರ್ವತದ ಮೇಲಿರು.

**3** **ನಲ್ಲೆ** : ನನ್ನ ಪ್ರಾಣಕಾಂತನನ್ನು
ರಾತ್ರಿಯೆಲ್ಲಾ ಹುಡುಕಿದೆ
ಹಾಸಿಗೆಯ ಮೇಲೆ ಹಾತೊರೆದೆ
ಹುಡುಕಿ ಹುಡುಕಿ ಸಿಗಲಾರದೆ ಬೇಸತ್ತೆ.
2 ಎದ್ದು ಊರೆಲ್ಲಾ ಅಲೆದಾಡಿದೆ
ಬೀದಿಗಳಲ್ಲಿ, ಚೌಕಗಳಲ್ಲಿ ಹುಡುಕಾಡಿದೆ
ಹುಡುಕಿ ಹುಡುಕಿ ಸಿಗಲಾರದೆ ಬೇಸತ್ತೆ.
3 ಊರಲ್ಲಿ ತಿರುಗುವ ಪಹರೆಯವರ ಕೈಗೆ
ಸಿಕ್ಕಿಬಿದ್ದೆ
"ನನ್ನ ಪ್ರಾಣಕಾಂತನನ್ನು ಕಂಡಿರಾ?" ಎಂದು
ವಿಚಾರಿಸಿದೆ.
4 ಅವರನ್ನು ಬಿಟ್ಟ ತುಸು ಹೊತ್ತಿನಲ್ಲೆ
ನನ್ನ ಪ್ರಾಣಕಾಂತನನ್ನು ಕಂಡುಕೊಂಡೆ.
ತಾಯ ಮನೆಗೆ, ನನ್ನ ಹೆತ್ತವಳ ಮನೆಗೆ
ಕರೆದೊಯ್ದೆ.
ಕೈಯ ಬಿಡದೆಯೆ ಕರೆದುಕೊಂಡು ಹೋದೆ.
5 ಜೆರುಸಲೇಮಿನ ಮಹಿಳೆಯರೇ,
"ತಾನೇ ಏಳುವುದಕ್ಕೆ ಮುಂಚೆ
ನನ್ನ ಪ್ರಿಯನನ್ನು ಎಚ್ಚರಿಸದಿರಿ
ಆತನ ವಿಶ್ರಾಂತಿಗೆ ಭಂಗ ತರದಿರಿ"
ಎಂದು ನಿಮಗೆ ವಿಧಿಸಿರುವೆನು
ವನದ ಹುಲ್ಲೆ ಹರಿಣಿಗಳ ಮೇಲೆ ಆಣೆಯಿಟ್ಟು.

**ಮೂರನೇ ಗೀತೆ**

6 ವರ್ತಕರು ಮಾರುವ ಸಕಲ ಸುಗಂಧ ತೈಲಗಳಿಂದ
ರಸಗಂಧ ಸಾಂಬ್ರಾಣಿ ಮುಂತಾದ ದ್ರವ್ಯಗಳಿಂದ
ಧೂಮಸ್ತಂಭಗಳೋಪಾದಿ
ಹೊರಹೊಮ್ಮುತ್ತಿರುವ
ಅರಣ್ಯದ ಮಾರ್ಗವಾಗಿ ಬರುತ್ತಿರುವ
ಆ ಮೆರವಣಿಗೆ ಯಾರದು?
7–8 ಇದೋ, ನೋಡು ಸೊಲೊಮೋನನ ಪಲ್ಲಕ್ಕಿ
ಅದರ ಸುತ್ತ ಇಸ್ರಯೇಲಿನ ಶೂರರು
ಅರವತ್ತು ಮಂದಿ

ಯುದ್ಧ ಪ್ರವೀಣರಾದ ಅವರಾಗಿಹರು
ಶಸ್ತ್ರಧಾರಿ
ಕತ್ತಿಯ ಕಟ್ಟಿಹರು ಪ್ರತಿಯೊಬ್ಬರು ಸೊಂಟಕ್ಕೆ
ಕತ್ತಲ ದುರಂತಗಳನ್ನು ಎದುರಿಸಲಿಕ್ಕೆ.
9 ಅರಸ ಸೊಲೊಮೋನನು ಮಾಡಿಸಿಕೊಂಡನು
ಲೆಬನೋನಿನ ಮರದಿಂದ ಆ ಪಲ್ಲಕ್ಕಿಯನು.
10 ಸ್ತಂಭಗಳನ್ನು ಬೆಳ್ಳಿಯಿಂದ
ಒರಗನ್ನು ಬಂಗಾರದಿಂದ
ಅದರ ಮೆತ್ತೆಯನ್ನು ಸಕಲಾತಿಯಿಂದ
ಅದರ ಮಧ್ಯಭಾಗವನ್ನು ಕಸೂತಿಯಿಂದ
ಅಲಂಕರಿಸಿಹರು ಜೆರುಸಲೇಮಿನ
ಮಹಿಳೆಯರು ಪ್ರೀತಿಯಿಂದ.
11 ಸಿಯೋನಿನ ಮಹಿಳೆಯರೇ, ಹೊರಟುಬನ್ನಿ
ಅರಸ ಸೊಲೊಮೋನನನ್ನು ನೋಡಬನ್ನಿ
ಆತನ ವಿವಾಹಮಹೋತ್ಸವ ದಿನದಂದು
ಆತನ ತಾಯಿ ತೊಡಿಸಿದ ಮುಕುಟವನ್ನು
ಆತ ಧರಿಸಿರುವುದನ್ನು ನೋಡಬನ್ನಿ.
**ನಲ್ಲ** : ಆಹಾ ! ನನ್ನ ಪ್ರಿಯಳೇ, ನೀನೆಷ್ಟು

## 4

ರೂಪವತಿ !
ಆಹಾ ! ಎಷ್ಟು ಸುಂದರೆ!
ಮುಸುಕಿನೊಳಗಿನ ಕಣ್ಣುಗಳು
ಪಾರಿವಾಳಗಳು
ನಿನ್ನ ತಲೆಗೂದಲಿನ ನರ್ತನವು
ಗಿಲ್ಯಾದ್ ಗುಡ್ಡದಿಂದ ಇಳಿದು ಬರುವ
ಆಡು ಮಂದೆಗೆ ಸಮಾನವು.
2 ನಿನ್ನ ಹಲ್ಲುಗಳ ಹೊಳಪು
ಉಣ್ಣೆ ಕತ್ತರಿಸಿ ಸ್ನಾನ ಮಾಡಿಸಿದ
ಕುರಿಮಂದೆಯ ಬಿಳುಪು.
ಮೇಲೇರುತ್ತಿವೆ ಅವು ಜೋಡಿ ಜೋಡಿಯಾಗಿ
ಒಂಟಿಯಾದುದೊಂದು ಇಲ್ಲ ಅವುಗಳಲಿ.
3 ನಿನ್ನ ತುಟಿ ನಯವಾದ ಕೆಂಪುಪಟ್ಟಿ
ಬಿಚ್ಚಿದಾಗ ನೀನೆಷ್ಟು ಸುರೂಪಿಣಿ !
ಮುಸುಕಿನಲ್ಲಿನ ನಿನ್ನ ಕೆನ್ನೆ,
ಹೋಳಾಗಿಸಿದ ದಾಳಿಂಬೆ !
4 ನಿನ್ನ ಕೊರಳು ದಾವೀದನ ನುಣುಪಾದ
ಗೋಪುರ
ನಿನ್ನ ಕತ್ತಿನ ಹಾರ ಸಾವಿರ ಶೂರರ
ಗುರಾಣಿಗಳ ಸರ.
5 ಹುಲ್ಲೆಯ ಅವಳಿಮರಿಗಳು ನಿನ್ನ ಸ್ತನಗಳೆರಡು

ನೆಲದಾವರೆಯ ನಡುವೆ ಮೇಯುತ್ತಿರುವುವು !
6 ಕತ್ತಲು ಕಳೆಯುವ ಮುನ್ನ
ಹೊತ್ತು ಮೂಡುವ ಮುನ್ನ
ಪರಿಮಳದ ಬೆಟ್ಟಕೆ ತೆರಳುವೆ
ಧೂಪದ ಗುಡ್ಡದೊಳು ಅಡ್ಡಾಡುವೆ.
7 ನನ್ನ ಪ್ರಿಯಳೇ, ಸರ್ವಾಂಗಸುಂದರಿಯೇ,
ನಿನ್ನೊಳು ಯಾವ ಕಳಂಕವು ಇಲ್ಲದಿರುವೆ.
8 ಬಾ, ವಧುವೆ, ಲೆಬನೋನಿನಿಂದ
ಬಾ, ನನ್ನೊಡನೆ ಲೆಬನೋನಿನಿಂದ
ಇಳಿದು ಬಾ ಅಮಾನದ ತುದಿಯಿಂದ
ಶೆನೀರ್ ಮತ್ತು ಹೆರ್ಮೋನ್ ಶಿಖರಗಳಿಂದ.
ಹೊರಟು ಬಾ ಸಿಂಹಗಳ ಗುಹೆಗಳಿಂದ
ಚಿರತೆಗಳ ಗುಡ್ಡಗಳಿಂದ.
9 ನನ್ನ ಪ್ರಿಯಳೇ, ನನ್ನ ವಧುವೇ.
ನನ್ನ ಹೃದಯವನ್ನು ನೀನು ಅಪಹರಿಸಿರುವೆ
ಒಂದೇ ಕಿರುನೋಟದಿಂದ,
ನನ್ನ ಹೃದಯವನ್ನು ವಶಪಡಿಸಿಕೊಂಡಿರುವೆ
ನಿನ್ನ ಕಂಠಹಾರದ ಒಂದೇ ರತ್ನದಿಂದ.
10 ನನ್ನ ಪ್ರಿಯಳೇ, ನನ್ನ ವಧುವೇ,
ನಿನ್ನ ಪ್ರೀತಿ ಎಷ್ಟೋ ರಮ್ಯ !
ನಿನ್ನ ಪ್ರೇಮ ಮಧುಪಾನಕ್ಕಿಂತ ಎಷ್ಟೋ
ಮಧುರ !
ನಿನ್ನ ತೈಲದ ಪರಿಮಳ
ಸುಗಂಧ ದ್ರವ್ಯಗಳಿಗಿಂತ ಎಷ್ಟೋ ಮನೋಹರ !
11 ನನ್ನ ವಧುವೇ,
ಜೇನು ಸುರಿಯುತ್ತಿದೆ ನಿನ್ನ ತುಟಿಗಳಿಂದ
ಹಾಲುಜೇನು ಬರುತ್ತಿದೆ ನಿನ್ನ
ನಾಲಗೆಯಡಿಯಿಂದ
ಲೆಬನೋನಿನ ಸುಗಂಧ ಸೂಸುತ್ತಿದೆ
ನಿನ್ನ ಉಡುಪಿನಿಂದ.
12 ನನ್ನ ಪ್ರಿಯಳು, ನನ್ನ ಮದಲಗಿತ್ತಿ
ಸುಭದ್ರವಾದ ಉದ್ಯಾನವನ
ಬೇಲಿಯೊಳಗಿನ ಬುಗ್ಗೆ ಮುಚ್ಚಿ
ಮುದ್ರಿಸಿದ ಚಿಲುಮೆ.
13 ನಿನ್ನ ಉದ್ಯಾನದಲ್ಲಿ ಬೆಳೆದಿವೆ
ದಾಳಿಂಬೆಯಂಥ ಉತ್ತಮ ಫಲವೃಕ್ಷಗಳು
ಜಟಮಾಂಸಿ, ಕರ್ಪೂರ, ಜಟಮಾಂಸಿ, ಕುಂಕುಮ
ಕೇಸರಿಗಳು.
14 ಬೆಳೆದಿವೆ ಪಟ್ಟೆಲವಂಗ ವಿವಿಧ ಸಾಂಬ್ರಾಣಿ
ಗಿಡಗಳು ರಸಗಂಧ, ಅಗರುಗಳು

ಸಕಲವಿಧ ಶ್ರೇಷ್ಠ ಸುಗಂಧ ಗಿಡಮೂಲಿಕೆಗಳು.
15 ನಿನ್ನ ತೋಟಗಳಿಗೆ ಬೇಕಾದ ಬುಗ್ಗೆ,
ಉಕ್ಕಿಬರುವ ಒರತೆ,
ಲೆಬನೋನಿನಿಂದ ಹರಿಯುವ ಕಾಲುವೆ
ನಿನ್ನಲ್ಲಿವೆ.
**ನಲ್ಲೆ** : 16ಉತ್ತರದ ಗಾಳಿಯೇ ಏಳು
ದಕ್ಷಿಣದ ಗಾಳಿಯೇ ಬೀಸು
ನನ್ನ ತೋಟದ ಮೇಲೆ ಬಿರುಸಾಗಿ ಬೀಸು
ಸುವಾಸನೆಯನ್ನು ದೂರದೂರ
ಪಸರಿಸು.
ಬರಲಿ ಎನ್ನಿನಿಯನು ನನ್ನ ತೋಟಕೆ
ಅತ್ಯುತ್ತಮ ಫಲಗಳನು ತಾನೇ
ಭುಜಿಸಲಿಕೆ.

**5** **ನಲ್ಲ** : ನನ್ನ ಪ್ರಿಯಳೇ, ನನ್ನ ವಧುವೇ,
ಇದೋ ನಾ ಬಂದಿರುವೆ ನನ್ನ
ತೋಟದೊಳಗೆ
ರಕ್ತಬೋಳ ಸುಗಂಧದ್ರವ್ಯಗಳನ್ನು
ಕೂಡಿಸಿರುವೆ.
ಜೇನುಗೂಡನ್ನೂ ಜೇನು ತುಪ್ಪವನ್ನೂ ತಿಂದಿರುವೆ
ದ್ರಾಕ್ಷಾರಸವನ್ನೂ ಹಾಲನ್ನೂ ಕುಡಿದಿರುವೆ.
ಮಿತ್ರರೇ, ತಿನ್ನಿರಿ; ಪ್ರಿಯರೇ, ಕುಡಿಯಿರಿ
ತೃಪ್ತಿಯಾಗುವಷ್ಟು ಪಾನಮಾಡಿರಿ.

### ನಾಲ್ಕನೇ ಗೀತೆ

**ನಲ್ಲೆ** : 2ನಾ ನಿದ್ರಿಸುತ್ತಿದ್ದರೂ,
ಎಚ್ಚರಗೊಂಡಿತ್ತು ನನ್ನ ಹೃದಯ
ಇದೋ, ಬಾಗಿಲು ತಟ್ಟುತಿಹನು ನನ್ನ
ಇನಿಯ !
**ನಲ್ಲ** : ನನ್ನ ಪ್ರಿಯಳೇ, ನನ್ನ ಕಾಂತಳೇ,
ಪಾರಿವಾಳವೇ, ಪರಿಪೂರ್ಣಳೇ.
ಬಾಗಿಲು ತೆಗೆ ನನಗೆ.
ನನ್ನ ತಲೆಯೆಲ್ಲಾ ನೆನೆದಿದೆ
ಇಬ್ಬನಿಯಿಂದ
ನನ್ನ ಕೂದಲು ತೊಯ್ದಿದೆ ರಾತ್ರಿಯ
ಮಂಜಿನಿಂದ.
**ನಲ್ಲೆ** : 3ತೆಗೆದುಹಾಕಿರುವೆನಲ್ಲಾ ನನ್ನ
ಅಂಗಿಯನ್ನು
ಮತ್ತೆ ಅದನು ಹಾಕಿಕೊಳ್ಳುವುದೆಂತು?

ತೊಳೆದಿರುವೆನಲ್ಲಾ ನನ್ನ ಪಾದಗಳನು
ಮತ್ತೆ ಅವುಗಳನ್ನು ಕೊಳೆ
ಮಾಡಿಕೊಳ್ಳುವುದೆಂತು?
4 ನನ್ನ ಕಾಂತನು ಕೈಯೊಡ್ಡಿಹನು ಬಾಗಿಲ
ಸಂದಿನಲಿ
ನನ್ನ ಮನ ಮಿಡಿಯಿತು ನನ್ನಂತರಂಗದಲಿ.
5 ಎದ್ದೆ ನಾನು ನಲ್ಲನಿಗೆ ಬಾಗಿಲ ತೆರೆಯಲೆಂದು
ಅಗುಳಿಯ ಮೇಲೆ ತೊಟ್ಟಿಕ್ಕಿತು ಪರಿಮಳ
ನನ್ನ ಕೈಗಳಿಂದ
ಆ ರಸಗಂಧ ದ್ರವ್ಯ ನನ್ನ ಬೆರಳುಗಳಿಂದ.
6 ಬಾಗಿಲ ತೆರೆದು ನೋಡಿದೆ ನನ್ನಿನಿಯನಿಗಾಗಿ
ಅಷ್ಟರೊಳಗೆ ಹೋಗಿಬಿಟ್ಟಿದ್ದನವನು
ಹಿಂದಿರುಗಿ.
ನಿಂತಂತಾಯಿತು ಅವನ ದನಿಗೆ ನನ್ನೆದೆಯ
ತುಡಿತ
ಎಷ್ಟೋ ಹುಡುಕಿದೆ, ಆದರೆ ಸಿಗಲಿಲ್ಲ
ಎಷ್ಟೋ ಕೂಗಿದೆ, ಆದರೆ ಉತ್ತರವೇ ಇಲ್ಲ.
7 ಸುತ್ತುತ್ತಿದ್ದರು ಬೀದಿಗಳಲಿ ಪಹರೆಯವರು
ನನ್ನನ್ನು ಕಂಡುಹಿಡಿದರು,
ಹೊಡೆದು ಗಾಯಗೊಳಿಸಿದರು.
ಕಿತ್ತುಕೊಂಡರು ಮೇಲುಹೊದಿಕೆಯನು
ಆ ಪೌಳಿಗೋಡೆಯ ಕಾವಲುಗಾರರು.
8 ಜೆರುಸಲೇಮಿನ ಮಹಿಳೆಯರೇ,
ಆಣೆಯಿಟ್ಟು ಹೇಳುತ್ತೇನೆ ನಿಮಗೆ:
"ನೀವು ನನ್ನ ಕಾಂತನನ್ನು ಕಂಡರೆ
ಅನುರಾಗದಿಂದ ನಾನು ಅಸ್ವಸ್ಥಳಾಗಿರುವೆ
ಎಂದೆ ತಿಳಿಸಿರಿ ಅವನಿಗೆ"

**ಮಹಿಳೆಯರು:**
9 "ಬೇರೆಯವರ ಕಾಂತರಿಗಿಂತ
ನಿನ್ನ ಕಾಂತನಲ್ಲಿ ಏನು ವಿಶೇಷ?
ಬೇರೆಯವರ ಇನಿಯರಿಗಿಂತ
ನಿನ್ನ ಕಾಂತನಲ್ಲಿ ಅದೇನು ಅತಿಶಯ?
ಸ್ತ್ರೀರತ್ನವೇ, ಹೇಳು ನಮಗೆಂತು ಈ
ಪ್ರಮಾಣ?"
**ನಲ್ಲೆ** : 10ನನ್ನ ನಲ್ಲ, ತೇಜೋಮಯ,
ರಕ್ತವರ್ಣ
ಹತ್ತುಸಾವಿರ ಜನರಲ್ಲಿ ಶ್ರೇಷ್ಠ.
11 ಅವನ ಶಿರ ಅಪ್ಪಟ ಬಂಗಾರವು
ಅವನ ಕೂದಲು ಕಾಗೆಕಪ್ಪು

12 ಅವನ ಕಣ್ಣುಗಳು
ತುಂಬುತೊರೆಗಳ ಬಳಿ ತಂಗುವ
ಹಾಲಿನ ಕೊಳದಲಿ ಮೈತೊಳೆವ
ಪಾರಿವಾಳಗಳು.
13 ಅವನ ಕೆನ್ನೆಗಳು ಕರ್ಣಕುಂಡಲದ ಪಾತಿಗಳು
ಸುಗಂಧ ಸಸ್ಯಗಳು ಬೆಳೆಯುವ ದಿಬ್ಬಗಳು
ಅವನ ತುಟಿಗಳು ಅಚ್ಚ ಪರಿಮಳ ಸೂಸುವ
ಕೆಂದಾವರೆಗಳು.
14 ಅವನ ಕೈಗಳು ಪೀತರತ್ನಖಚಿತ ಚಿನ್ನದ
ಸಲಾಕೆಗಳು
ಅವನ ದೇಹ ಇಂದ್ರನೀಲಮಯವಾದ
ದಂತಫಲಕವು.
15 ಅವನ ಕಾಲುಗಳು
ಅಪರಂಜಿಯ ಸುಣ್ಣಪಾದಗಳ ಮೇಲೆ
ನಿಂತಿರುವ ಚಂದ್ರಕಾಂತ ಸ್ತಂಭಗಳು.
ಅವನ ಗಾಂಭೀರ್ಯ ಲೆಬನೋನಿಗೆ
ಸಮಾನ
ದೇವದಾರು ಮರಗಳಂತೆ ರಮಣೀಯ.
16 ಅವನ ಮಾತು ಮಧುರ
ಅವನು ಸರ್ವಾಂಗ ಸುಂದರ.
ಜೆರುಸಲೇಮಿನ ಮಹಿಳೆಯರೇ,
ಇವನೇ ನನ್ನ ಪ್ರಿಯನು
ಇವನೇ ನನ್ನ ಇನಿಯನು.

**6** **ಮಹಿಳೆಯರು**: ಮಹಿಳಾಮಣಿಯೇ,
ನಿನ್ನಿನಿಯನು ಹೋದುದೆಲ್ಲಿಗೆ?
ಅವನನ್ನು ಹುಡುಕೋಣವೇ ನಾವು
ನಿನ್ನೊಂದಿಗೆ?
ಹೇಳು, ನಿನ್ನಿನಿಯನು ಹೋದುದೆಲ್ಲಿಗೆ?
**ನಲ್ಲೆ** : 2ನನ್ನ ಕಾಂತನು ತೆರಳಿಹನು
ಸುಗಂಧ ಸಸ್ಯಗಳಿರುವ ತೋಟಕೆ
ಉದ್ಯಾನಗಳಲ್ಲಿ ಮಂದೆಯನು
ಮೇಯಿಸುವುದಕೆ
ಅಲ್ಲಿನ ನೆಲದಾವರೆಗಳನ್ನು ಕೊಯ್ದು
ತರುವುದಕೆ.
3 ಎನ್ನಿನಿಯನು ನನ್ನವನೇ, ನಾನು ಅವನವಳೇ
ತನ್ನ ಮಂದೆಯ ಮೇಯಿಸುತ್ತಿಹನು
ನೆಲದಾವರೆಗಳ ನಡುವೆ.

## ಐದನೇ ಗೀತೆ

**ನಲ್ಲ** : 4ನನ್ನ ಪ್ರಿಯಳೇ,
ನೀನು ಸುಂದರಿ, ತಿರ್ಜನಗರದಂತೆ
ಮನೋಹರಿ, ಜೆರುಸಲೇಮಿನಂತೆ
ಭಯಂಕರಿ, ಪತಾಕಿನಿಯಂತೆ.
5 ತಿರುಗಿಸು ನಿನ್ನ ಕಣ್ಣುಗಳನ್ನು ನನ್ನ ಕಡೆಯಿಂದ
ನನ್ನ ಸೆರೆಹಿಡಿದು ಬಿಡುವವು ತಮ್ಮ
ನೋಟದಿಂದ.
ನಿನ್ನ ಕೇಶರಾಶಿಯ ನರ್ತನ
ಗಿಲ್ಯಾದ್ ಗುಡ್ಡದಿಂದ ಇಳಿಯುವ
ಆಡುಮಂದೆಗೆ ಸಮಾನ.
6 ನಿನ್ನ ಹಲ್ಲುಗಳ ಹೊಳಪು
ತೊಳೆದ ಕುರಿಮಂದೆಯ ಬಿಳುಪು.
ಮೇಲೇರುತ್ತವೆ ಅವು ಜೋಡಿಜೋಡಿಯಾಗಿ
ಒಂಟಿಯಾದುದೊಂದು ಇಲ್ಲ ಅವುಗಳಲಿ.
7 ಮುಸುಕಿನಲಿ ನಿನ್ನ ಕೆನ್ನೆ
ಮಾಗಿ ಒಡೆದಿರುವ ದಾಳಿಂಬೆ.
8 ಅರಸನಿಗೆ ರಾಣಿಯರು ಅರವತ್ತು ಮಂದಿ
ಉಪಪತ್ನಿಯರು ಎಂಬತ್ತು ಮಂದಿ
ಯುವತಿಯರು ಲೆಕ್ಕವಿಲ್ಲದಷ್ಟು ಮಂದಿ.
9 ನನ್ನ ಪಾರಿವಾಳ, ನನ್ನ ನಿರ್ಮಲೆ ಇವಳೇ
ಏಕಮಾತ್ರ ಪುತ್ರಿ ತಾಯಿಗೆ
ಮುದ್ದುಮಗಳು ಹೆತ್ತವಳಿಗೆ.
ಈಕೆ ಧನ್ಯಳೆಂದು ಹೊಗಳಿದರು ಯುವತಿಯರು
ನೋಡಿ
ರಾಣಿಯರು, ಉಪಪತ್ನಿಯರು ಕೊಂಡಾಡಿದರು
ಈ ಪರಿ:
10 "ಉದಯಿಸುತ್ತಿರುವಳಿವಳು
ಅರುಣೋದಯದಂತೆ
ಸುಂದರಿಯಾಗಿಹಳು ಚಂದ್ರನಂತೆ
ಶುಭ್ರಳಾಗಿಹಳು ಸೂರ್ಯನಂತೆ
ಭಯಂಕರಳು ಪತಾಕಿನಿಯಂತೆ
ಎಂಥವಳಿರಬಹುದು ಇವಳು ಪೇಳ್ಳೈ?
11 ದ್ರಾಕ್ಷಾಬಳ್ಳಿ ಚಿಗುರಿದೆಯೋ
ದಾಳಿಂಬೆಗಿಡ ಹೂಬಿಟ್ಟಿದೆಯೋ
ಎಂದು ನೋಡಲಿಕೆ
ಕಣಿವೆಯಲ್ಲಿರುವ ಕುಸುಮಗಳನು ಕಾಣಲಿಕೆ
ನಾ ನಡೆದೆ ಬಾದಾಮಿಯ ತೋಟಕೆ.
12 ಇದ್ದಕ್ಕಿದ್ದ ಹಾಗೆಯೇ
ನಾಯಕನಾಗಿ ನನ್ನ ನಾಡಿಗೆ

ನಾ ಕುಳಿತಿದ್ದೆ ರಥದ ಮೇಲೆ.
13 ಶೂಲಮ್ ಊರಿನ ನಾರಿಯೇ
ತಿರುಗು ಇತ್ತ, ತಿರುಗು ಅತ್ತ
ನಾವು ನಿನ್ನನ್ನು ನೋಡುವಂತೆ
ತಿರುಗು ಇತ್ತ, ತಿರುಗು ಅತ್ತ !
**ನಲ್ಲೆ** : ಎರಡು ಸಾಲಿನ ನರ್ತಕಿಯರ ನಡುವೆ
ಕುಣಿಯುವವಳನ್ನು ನೋಡುವಂತೆ
ಶೂಲಮ್ ಊರಿನವಳಾದ ನನ್ನನು
ನೀನು ನೋಡುವುದೇಕೆ?

**7** **ನಲ್ಲ** : ಅರಸಕುವರಿಯೇ,
ಕೆರಗಳನ್ನು ಮೆಟ್ಟಿ ನಿಂತಿರುವ ನಿನ್ನ
ಪಾದಗಳೆಷ್ಟು ಚೆಂದ !
ದುಂಡಾದ ನಿನ್ನ ತೊಡೆಗಳು
ಕುಶಲ ಶಿಲ್ಪಿಮಾಡಿದ ಸ್ತಂಭ !
2 ನಿನ್ನ ಹೊಕ್ಕಳು ಮಿಶ್ರಪಾನಕ ತುಂಬಿದ
ಗುಂಡುಬಟ್ಟಲು
ನಿನ್ನ ಹೊಟ್ಟೆ ನೆಲದಾವರೆಗಳಿಂದ
ಅಲಂಕೃತವಾದ ಗೋಧಿರಾಶಿಯ ಬಟ್ಟಲು
3 ನಿನ್ನ ಸ್ತನಗಳೆರಡೂ ಹುಲ್ಲೆಯ
ಅವಳಿಮರಿಗಳು.
4 ದಂತದ ಗೋಪುರ ನಿನ್ನ ಕೊರಳು
ನಿನ್ನ ಕಣ್ಣುಗಳು ಹೋಷ್ಬೋನಿನಲ್ಲಿನ
ಬತ್‌ರಬ್ಬೀಮ್ ಬಾಗಿಲ ಬಳಿ
ಇರುವ ಕೊಳಗಳು
ನಿನ್ನ ಮೂಗು ದಮಸ್ಕದ ಕಡೆ ಇರುವ
ಲೆಬನೋನಿನ ಬುರುಜು.
5 ನಿನ್ನ ಶಿರ ಎತ್ತರವಾದ ಕಾರ್ಮೆಲ್ ಶಿಖರದಂತೆ
ಗಂಭೀರ
ನಿನ್ನ ತಲೆಗೂದಲಿಗಿದೆ ಥಳಥಳಿಸುವ
ನುಣುಪುಹೊಳಪಿನ ಬಣ್ಣ
ತನ್ನ ತೆಕ್ಕೆಯಲ್ಲಿ ಅರಸನನೇ ಸೆರೆಹಿಡಿಯುವಂಥ
ಆಕರ್ಷಣ.
6 ಪ್ರೇಮವೇ,
ಸಕಲ ಸೌಭಾಗ್ಯಗಳಿಂದ ನೀನೆಷ್ಟು ಸುಂದರ?
ನೀನೆಷ್ಟು ಮನೋಹರ !
7 ನೀಳವಾದ ನಿನ್ನ ಆಕಾರವು ಖರ್ಜೂರದ ಮರವು
ನಿನ್ನ ಸ್ತನಗಳು ಅದರ ಗೊಂಚಲುಗಳು.
8 ಆ ಮರವನು ಹತ್ತಿ ಹಿಡಿಯುವೆನು ರೆಂಬೆಗಳನು

ನಿನ್ನ ಸ್ತನಗಳು ನನಗೆ ದ್ರಾಕ್ಷಿಯ
ಗೊಂಚಲುಗಳು
ಸೇಬುಹಣ್ಣಿನ ಪರಿಮಳದಂತೆ ನಿನ್ನ ಉಸಿರು !
**ನಲ್ಲೆ** : 9ನಿನ್ನ ಚುಂಬನ ಶ್ರೇಷ್ಠವಾದ
ಮಧುಪಾನ
ನನ್ನ ಇನಿಯನ ಬಾಯಲ್ಲಿಳಿಯಲಿ
ಆ ರಸಪಾನ
ನಿದ್ರಿಸುವವನಾ ತುಟಿಗಳಲಿ ಹರಿಯಲಿ
ಆ ಪಾನ !
10 ನಾನು ನನ್ನ ನಲ್ಲನ ನಲ್ಲೆ
ಆತನ ಆಸೆ ನನ್ನ ಮೇಲೆ !
11 ಎನ್ನಿನಿಯನೇ, ಬಾ ಹೋಗೋಣ ವನಕೆ
ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುವುದಕೆ.
12 ಬೆಳಗ್ಗೆ ಹೊರಟು ತೋಟಗಳಿಗೆ
ಹೋಗೋಣ ಬಾ
ದ್ರಾಕ್ಷಿ ಚಿಗುರಿದೆಯೋ, ಅದರ
ಹೂ ಅರಳಿದೆಯೋ
ದಾಳಿಂಬೆ ಹೂ ಬಿಟ್ಟಿದೆಯೋ
ನೋಡೋಣ ಬಾ
ಅಲ್ಲೆ ನಿನಗೆ ನನ್ನ ಪ್ರೀತಿಯನರ್ಪಿಸುವೆ ಬಾ.
13 ಕಾಮಜನಕ ವೃಕ್ಷಗಳು ಹೀರುತ್ತಿವೆ ಪರಿಮಳ
ಒಳ್ಳೊಳ್ಳೆಯ ಬಗೆಬಗೆಯ,
ಹಳೆಹೊಸ ಹಣ್ಣುಗಳ
ನಾನಿಟ್ಟುಕೊಂಡಿರುವೆ, ಪ್ರಿಯನೇ,
ಬಾಗಿಲ ಹತ್ತಿರ ನಿನಗೋಸ್ಕರ.

**8** **ನಲ್ಲೆ** : ನನ್ನ ಸಹೋದರನು,
ನನ್ನ ತಾಯಿಯ ಹಾಲ ಕುಡಿದವನು
ನೀನಾಗಿದ್ದರೆ ಚೆನ್ನಾಗಿರುತ್ತಿತ್ತಲ್ಲಾ !
ಆಗ ನಿನ್ನನ್ನು ಕಂಡು ಹೊರಗಡೆಯೆ
ಮುದ್ದಿಸಬಹುದಿತ್ತಲ್ಲಾ
ಯಾರು ನನ್ನನ್ನಾಗ ನಿಂದಿಸುತ್ತಿರಲಿಲ್ಲವಲ್ಲಾ !
2 ಆಗ ನಿನ್ನನ್ನು ಕರೆದುಕೊಂಡು ಹೋಗುತ್ತಿದ್ದೆ
ನನ್ನನ್ನು ಹೆತ್ತ ತಾಯಿಯ ಮನೆಗೆ
ಅಲ್ಲೆ ಉಪದೇಶ ಮಾಡಬಹುದಾಗಿತ್ತು
ನೀನು ನನಗೆ
ದ್ರಾಕ್ಷಿಯ ಮಿಶ್ರಪಾನಕವನ್ನು ನಾ ಕೊಡುತ್ತಿದ್ದೆ
ನಿನಗೆ
ದಾಳಿಂಬೆ ರಸವನ್ನು ಕುಡಿಸುತ್ತಿದ್ದೆ ನಿನಗೆ.

3 ನನಗೆ ತಲೆದಿಂಬಾಗಲಿ ನಿನ್ನ ಎಡಗೈ
ನನ್ನನ್ನು ತಬ್ಬಿಕೊಳ್ಳಲಿ ನಿನ್ನ ಬಲಗೈ.
4 "ಜೆರುಸಲೇಮಿನ ಮಹಿಳೆಯರೇ,
ತಾನೇ ಏಳುವುದಕ್ಕೆ ಮುಂಚೆ
ನನ್ನ ಪ್ರಿಯನನ್ನು ಎಚ್ಚರಿಸದಿರಿ
ಅವನ ವಿಶ್ರಾಂತಿಗೆ ಭಂಗ ತರದಿರಿ"
ಎಂದು ನಾನು ನಿಮಗೆ ಆಣೆಯಿಟ್ಟು
ಹೇಳುತ್ತೇನೆ.

**ಮಹಿಳೆಯರು :**
5 ನಲ್ಲನನು ಒರಗಿಕೊಂಡು
ಅಡವಿಯಿಂದ ಬರುವ ಈಕೆ ಯಾರು?
**ನಲ್ಲೆ** : ಎಬ್ಬಿಸಿದೆ ನಿನ್ನನ್ನು ಸೇಬುಮರದ
ಅಡಿಯಲಿ
ನಿನ್ನ ತಾಯಿ ಪ್ರಸವವೇದನೆಯಿಂದ
ಹಡೆದಾ ಸ್ಥಳದಲಿ
ನಿನ್ನನ್ನು ಆಕೆ ಗರ್ಭಧರಿಸಿದಾ
ಜಾಗದಲಿ.
6 ನಿನ್ನ ವೃಕ್ಷದಲಿ, ನಿನ್ನ ಹಸ್ತಗಳಲಿ
ಧರಿಸಿಕೊ ನನ್ನನ್ನು ಪ್ರೇಮ ಮುದ್ರೆಯಾಗಿ.
ಪ್ರೀತಿ ಮೃತ್ಯುವಿನಷ್ಟು ಶಕ್ತಿಶಾಲಿ !
ಮತ್ಸರ ಪಾತಾಳದಷ್ಟು ಕ್ರೂರಿ
ಅದರ ಜ್ವಾಲೆ ಬೆಂಕಿಯ ಉರಿ
ಧಗಧಗಿಸುವ ಕೋಪಾಗ್ನಿ.
7 ನಂದಿಸಲಾರವು ಪ್ರೀತಿಯನ್ನು ಜಲರಾಶಿಗಳು
ಮುಳುಗಿಸಲಾರವು ಅದನು ಪ್ರವಾಹಗಳು.
ಪ್ರೀತಿಯನು ಗಳಿಸಲು
ಮನೆಮಾರುಗಳ ಮಾರಿದರೂ
ತಿರಸ್ಕಾರವೆ ಅಂಥವನಿಗೆ ಸಿಗುವುದು.

## ಆರನೇ ಗೀತೆ

**ಸೋದರರು:**
8 ಇನ್ನೂ ಸ್ತನ ಬಾರದ ತಂಗಿ ನಮಗಿದ್ದಾಳೆ
ನಾವೇನು ಮಾಡೋಣ ಅವಳನ್ನು ವರಿಸಲು
ಬಂದರೆ?
9 ಅವಳೊಂದು ಕೋಟೆಯಾದರೆ
ಕಟ್ಟುವೆವು ಬುರುಜನ್ನು ಬೆಳ್ಳಿಯಿಂದ.
ಅವಳೊಂದು ಬಾಗಿಲಾದರೆ
ಭದ್ರಪಡಿಸುವೆವು ದೇವದಾರು ಮರಗಳಿಂದ.
**ನಲ್ಲೆ** : 10ನಾನೊಂದು ಕೋಟೆ, ನನ್ನ ಸ್ತನಗಳೇ

ಬುರುಜುಗಳು
ಆತನ ದೃಷ್ಟಿಯಲ್ಲಿ ನಾ ಹೊಂದುವೆನು
ಶಾಂತಿಯನು.
**ನಲ್ಲ** : 11 ಸೊಲೊಮೋನನಿಗಿತ್ತು ಬಾಲ್ಹಾಮೋನಿ
ನಲ್ಲಿ ಒಂದು ದ್ರಾಕ್ಷಾ ತೋಟ
ಅದನು ಗುತ್ತಿಗೆಗೆ ಕೊಡಲು
ಮೇಲ್ವಿಚಾರಕರಿಗೆ ವಹಿಸಿದ.
ಪ್ರತಿಯೊಬ್ಬ ಗುತ್ತಿಗೆಗಾರ
ತೆರಬೇಕಾಗಿತ್ತು ಸಾವಿರ ಬೆಳ್ಳಿನಾಣ್ಯ.
12 ಸೊಲೊಮೋನನನೇ,
ಆ ಸಾವಿರ ಬೆಳ್ಳಿನಾಣ್ಯ ನಿನಗೇ ಇರಲಿ
ಮೇಲ್ವಿಚಾರಕರಿಗೆ ಇನ್ನೂರು ನಾಣ್ಯ ಸೇರಲಿ.
ಆದರೆ ನನ್ನ ದ್ರಾಕ್ಷಾತೋಟ ನನ್ನ ವಶದಲೇ
ಇರಲಿ.
13 ತೋಟಗಳಲಿ ವಾಸವಾಗಿರುವವಳೇ,
ನನಗೆ ಕೇಳಮಾಡು ನಿನ್ನ ದನಿ
ಗೆಳೆಯರು ಕಾದಿದ್ದಾರೆ ಅದಕ್ಕಾಗಿ.
**ನಲ್ಲೆ** : 14 ಸುಗಂಧಸಸ್ಯ ಪರ್ವತದಿಂದಲೆ
ಜಿಂಕೆಯಂತೆ, ಪ್ರಾಯದ ಹುಲ್ಲೆಯಂತೆ
ತ್ವರೆಮಾಡಿ ಬಾ ನನ್ನಿನಿಯನೇ.